



ಉಳಿದು ಸ್ಥಳಗಳನ್ನು ವೀಕ್ಷಿಸಿ ಹೋಗುವ ಪರಿಪಾಟವಿತ್ತು. ರಾಜರ ಕಾಲದಲ್ಲಿ ಅದಕ್ಕಾಗಿಯೇ ರಸ್ತೆಬದಿ ತಂಗುದಾಣಗಳನ್ನು ಕಟ್ಟಲಾಗುತ್ತಿತ್ತು. ಆದರೆ ಈಗ ಜಾಗತಿಕವಾಗಿ ಪ್ರವಾಸ ಒಂದು ಉದ್ಯಮವಾಗಿ ಬೆಳೆದ ಮೇಲೆ, ರಾಶಿ ರಾಶಿ ಹಣದ ವಹಿವಾಟು ನಡೆಯುವ, ಲಕ್ಷಾಂತರ ಜನರಿಗೆ ಅನ್ನದ ದಾರಿ ಒದಗಿಸುವ ಮಾರ್ಗವಾದ ಮೇಲೆ ಪ್ರವಾಸದ ಶೈಲಿಯೇ ಬದಲಾಗಿದೆ. ನಿಮ್ಮ ಬಜೆಟ್ಟಿಗೆ ಅನುಗುಣವಾಗಿ ನಿಮ್ಮ ಮನೆಗೇ ಬಂದು ಪ್ರವಾಸದ ರೂಪುರೇಶೆಗಳನ್ನು ಸಿದ್ಧಪಡಿಸಿ ನಿಮ್ಮನ್ನು ಪ್ರವಾಸಕ್ಕೆ ಕಳಿಸುವ ಸಂಸ್ಥೆಗಳಿವೆ.

ಮನೆಯಿಂದ ಹೊರಟು ಮನೆಗೆ ಮರಳುವವರೆಗೂ ನಿಮ್ಮ ದೇಖರೇಖಿ ಅವರ ಜವಾಬ್ದಾರಿಯಾಗಿರುತ್ತದೆ. ಪ್ರವಾಸದ ವೇಳೆ ಆಗಬಹುದಾದ ಅಸೌಖ್ಯ ನೋಡಿಕೊಳ್ಳಲು ವಿಮಾಸಂಸ್ಥೆಗಳಿವೆ. ನಿಮ್ಮದು ಧಾರ್ಮಿಕ ಪ್ರವಾಸವಾಗಿದ್ದರೆ ನಿಮ್ಮ ಅಜ್ಜನ ಆತ್ಮಕ್ಕೆ ಶಾಂತಿ ಮಾಡಿಸುವುದರಿಂದ ಹಿಡಿದು ನಿಮಗೆ ಪುಣ್ಯಸಂಪಾದನೆ ಮಾಡಿಸುವುದಕ್ಕೆ ಮೀಸಲಾದ ಸಂಸ್ಥೆಗಳೇ ಇವೆ. ಎಲ್ಲವೂ ನಿಮ್ಮಲ್ಲಿರುವ ಹಣದ ಮೇಲೆ ನಿರ್ಣಯ ಎಂಬುದು ಮಾತ್ರ ನಿಜ.

ಇದು ನಮ್ಮ ದೇಶದ ಕಥೆಯಾದರೆ, ಪರದೇಶಗಳಲ್ಲಿ ಪ್ರವಾಸದ ವ್ಯಾಖ್ಯೆಯೇ ಬದಲಾಗುತ್ತಿದೆ. ಸಿದ್ಧವಾಗಿರುವ ಪ್ರವಾಸಿ ವಾಹನಗಳು ಪ್ರವಾಸದ ಮುಖವನ್ನೇ ಬದಲಿಸಿವೆ. ವ್ಯಾನುಗಳೇ ಮನೆಯಾಗಿ, ಹೋಟೆಲುಗಳಾಗಿ, ಐಷಾರಾಮಿ ಬಂಗಲೆಗಳಾಗಿ ಪರಿವರ್ತನೆಗೊಳ್ಳುತ್ತವೆ. ಒಟ್ಟಿಗೆ ಪ್ರವಾಸ ಹೋಗುವ ಗುಂಪು ಹಾಗೂ ಅವುಗಳ ಅಗತ್ಯಕ್ಕೆ ತಕ್ಕಂತೆ ವ್ಯಾನುಗಳನ್ನು ಮಾರ್ಪಡಿಸಿ ಕೊಡಲಾಗುವ ವ್ಯವಸ್ಥೆಯೂ ಜನಪ್ರಿಯವಾಗಿದೆ.

ಈ ವಾಹನಗಳಲ್ಲಿ, ಒಂದು ಮನೆಯಲ್ಲಿರುವ ಎಲ್ಲಾ ಅನುಕೂಲಗಳು ದಿವಾನ ಕೋಣೆ, ಮಲಗುವ ಕೋಣೆ, ಅಡುಗೆ ಮನೆ, ಶೌಚಾಲಯ ಮತ್ತು ಬಚ್ಚಲಮನೆ ಎಲ್ಲವೂ ಇರುತ್ತವೆ. ನಿಮಗೆ ಬೇಕಾದಂತೆ ಟಿ.ವಿ. ಅಳವಡಿಸಲಾಗಿದೆ. ಈ ಪ್ರವಾಸದ ವಿಶೇಷವೆಂದರೆ, ಇಡೀ ನಿಮ್ಮ ಸಂಸಾರವೇ ಕೆಲವು ಕಾಲ ಈ ವಾಹನದ ಮೇಲೆ ನಿಂತಿದೆ, ಬೇಕಾದಾಗ ನಿಲ್ಲುತ್ತದೆ. ರಸ್ತೆಯುದ್ದಕ್ಕೂ ಅಲ್ಲಲ್ಲಿ ಇವುಗಳಿಗೆ ಚಾರ್ಜಿಂಗ್ ಪಾಯಿಂಟುಗಳಿರುತ್ತವೆ. ನಾಕಾರು ಕುಟುಂಬಗಳು ಹೀಗೆ ವ್ಯಾನುಗಳನ್ನು ಚಾಲನೆ ಮಾಡಿಕೊಂಡು ಬಂದರೆ ಅವುಗಳನ್ನು ಒಂದು ಕಡೆ ನಿಲ್ಲಿಸಿ ಬೇಕಾದ ಅಡುಗೆ ಮಾಡಿಕೊಂಡು ಒಟ್ಟಿಗೆ ಊಟ ಮಾಡಿ ಟೆಂಟು ಹಾಕಿಕೊಂಡು ವಿರಮಿಸಬಹುದು.

ಮಕ್ಕಳು, ಯುವಕರು, ಮುದುಕರು, ಅವರವರ ಆಸಕ್ತಿಗಳಿಗೆ ತಕ್ಕಂತೆ ಗುಂಪುಗಳಲ್ಲಿ ಆಟವಾಡುತ್ತಾ ಬಹುರಾತ್ರಿ ಕಳೆಯಬಹುದು. ಮತ್ತೆ ಬೆಳಗಾದ ಮೇಲೆ ಪ್ರವಾಸ ಆರಂಭ. ಗಾಡಿ ನಮ್ಮ ಕೈಲೇ ಇದ್ದು ಚಾಲಕರು ನಾವೇ ಆಗಿರುವುದರಿಂದ ಎಲ್ಲಿಗೆ ಬೇಕಾದರೂ ಹೋಗಬಹುದು. ಎಷ್ಟು ದಿನ ಬೇಕಾದರೂ ಚಲಿಸಬಹುದು. ನಿಮಗೆ ಬೇಜಾರು ಬಂದಾಗ ಸೀದಾ ವ್ಯಾನು ಹಿಂತಿರುಗಿಸಿ ಮನೆಗೆ ಬರಬಹುದು.

ಹೀಗೆ ವಾಹನಗಳನ್ನು ನೀಡುವ ಕಂಪನಿಗಳಲ್ಲಿ ಕೆಲಸ ಮಾಡುವ ಗೆಳೆಯರ ಪ್ರಕಾರ ಜನರು ತಿಂಗಳುಗಟ್ಟಲೆ ಹೀಗೆ ವ್ಯಾನುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಕೆಲವರು ಹೋದವರು ವಾಪಸ್ ಬಾರದೆ ವಾಹನವನ್ನು ಎಲ್ಲಿಯೋ ಅನಾಥವಾಗಿ ಬಿಟ್ಟು ಹೋದ ಅಪರೂಪದ ಪ್ರಕರಣಗಳೂ ಇವೆ.

ಕಂಪನಿಗಳು ವಾಹನಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತವೆ. ಹೀಗಾಗಿ ರಸ್ತೆ ಮಧ್ಯೆ ಕೆಟ್ಟು ನಿಲ್ಲುವ ಸಾಧ್ಯತೆಯೇ ಇಲ್ಲ. ಹಾಗೆ ಒಂದು ವೇಳೆ ತೊಂದರೆಯಾದರೆ ಕಂಪನಿ ಕೂಡಲೇ ಬೇರೆ ವಾಹನದ ವ್ಯವಸ್ಥೆ ಮಾಡುತ್ತದೆ. ಈ ತೆರನ ಪ್ರಯಾಣಕ್ಕೆ ಅಗತ್ಯ ಷರತ್ತು, ಅಧಿಕೃತ ಚಾಲನಾ ಪರವಾನಿಗೆ ಇರಬೇಕು. ವಾಹನ ಚಲಾಯಿಸುವುದರಲ್ಲಿ ನಿಷ್ಣಾತರಾಗಿರಬೇಕು. ಆಗ ಪ್ರವಾಸವನ್ನು ನಿಜಕ್ಕೂ ಖುಷಿಯಲ್ಲಿ ಅನುಭವಿಸಬಹುದು.

ಅಮೆರಿಕದಿಂದ ಹಿಡಿದು ಆಸ್ಟ್ರೇಲಿಯಾದವರೆಗೆ ಪರದೇಶಗಳಲ್ಲಿ ಜನವೀಗ ವ್ಯಾನುಗಳನ್ನು ತಿಂಗಳುಗಟ್ಟಲೆ ಬಾಡಿಗೆ ಪಡೆದು ಅಡುಗೆ ಸಾಮಾನುಗಳನ್ನೂ ಹೇರಿಕೊಂಡು ಮನೆಯಿಂದ ಹೊರಬೀಳುವುದು ಸಾಮಾನ್ಯ. ಇದು ಅವರಿಗೆ, ವರ್ಷಕ್ಕೆ ಒಮ್ಮೆಯಾದರೂ ಮಾಡಲೇಬೇಕಾದ ಪ್ರವಾಸ. ಯೂರೋಪಿನಲ್ಲಿ ದೇಶದೇಶಗಳ ಗಡಿ ಮೀರಿ ಹೀಗೆ ಪ್ರವಾಸ ಹೋಗುತ್ತಾರೆ. ಮನಸ್ಸಿಗೆ ಬಂದಂತೆ ತಿರುಗಬಹುದಾದ, ಉಳಿಯಬಹುದಾದ ಸಾಧ್ಯತೆ ಒದಗಿಸುವ ಈ ಪ್ರವಾಸ ಕಡಿಮೆ ಖರ್ಚಿನದೂ ಆಗಿರುವುದರಿಂದ ಈಗ ಎಲ್ಲೆಡೆ ಪ್ರಚಾರಕ್ಕೆ ಬರುತ್ತಿದೆ.

